ತಕ್ಷಣ ಗಮನಕ್ಕೆ ಬರುವಂತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು.

ಶ್ರೀ ಎ. ಲಕ್ಷ್ಮೀ ಸಾಗರ್.—ಲಿಖಿತ ಮೂಲಕ ಉತ್ತರಿಸುವ ಉತ್ತರದ ಪಟ್ಟಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ಮಂಗಳೂರು ತಾಲ್ಲೂಕಿನಲ್ಲಿ ಶಾಲಾ ಕೋಣೆಗಳ ನಿರ್ಮಾಣ

೧೨೦೬ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೪-೫೫, ೫೫ ನೇ ಡಿಸೆಂಬರ್ ಅಖೈರುವರೆಗೆ ಮಂಗಳೂರು ತಾಲ್ಲೂಕಿನಲ್ಲಿ ಶಾಲಾ ಕಟ್ಟಡ, ಕೋಣೆಗಳ ನಿರ್ಮಾಣ ಎಷ್ಟಾಗಿದೆ ?

ಆ) ನಿರ್ಮಾಣವಾಗದೆ ಇನ್ನೂ ಉಳಿದಿರುವ ಕೋಣೆಗಳ ಸಂಖ್ಯೆ ಎಷ್ಟು ?

ಇ) ಹಾಗಿದ್ದಲ್ಲಿ ಯಾವಾಗ ಮಾಡಿ ಮುಗಿಸಲಾಗುವುದು ?

ಶ್ರೀ ಡಿ. ಮಂಜುನಾಥ್.—(ಶಿಕ್ಷಣ ಸಚಿವರು).—

	ಕಟ್ಟಡ	ಕೊಠಡಿ
ಅ) ೧೯೫೪-೫೫	—	೪
೧೯೫೫-೫೬	—	—

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಭದ್ರಾ ಮೇಲ್ದಂಡೆ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ

೧೦೭೨. ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಜಗಳೂರು).— ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಭದ್ರಾ ಮೇಲ್ದಂಡೆ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು;

ಆ) ಸದರಿ ಯೋಜನೆಯ ಅಂದಾಜು ವೆಚ್ಚವೆಷ್ಟು;

ಇ) ಇದರಿಂದ ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆ;

ಈ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಯೋಜನೆಯ ಅನ್ವೇಷಣೆ ಕಾರ್ಯ ನಡೆಯುತ್ತಿದೆ.

ಆ) ಅನ್ವೇಷಣಾ ಕಾರ್ಯವು ಪೂರ್ಣವಾಗಿ ಅಂತಿಮ ಸಾಧ್ಯತಾ ವರದಿ ತಯಾರಾದ ನಂತರ ಯೋಜನೆಯ ಅಂದಾಜು ವೆಚ್ಚವನ್ನು ಕೂಡಲು ಸಾಧ್ಯವಾಗುವುದು.

ಇ) ಯೋಜನೆಯ ಅನ್ವೇಷಣಾ ಕಾರ್ಯವು ಪೂರ್ಣವಾದ ನಂತರ ಈ ಮಾಹಿತಿಯನ್ನು ಕೂಡಲು ಸಾಧ್ಯವಾಗುವುದು.

ಈ) ಯೋಜನಾ ವರದಿಯನ್ನು ಪೂರ್ಣಗೊಂಡ ನಂತರ ಯೋಜನಾ ವರದಿಯನ್ನು ಕೇಂದ್ರ ಸರ್ಕಾರದ ಸಮಿತಿಗೆ ಕಳುಹಿಸಲಾಗುವುದು. ಸಹಮತಿ ಬಂದ ನಂತರ ರಾಜ್ಯದ ಸಂಪನ್ಮೂಲಗಳನ್ನು ಅವಲಂಬಿಸಿ ಈ ಯೋಜನೆಯ ಕಾರ್ಯ ತೆಗೆದುಕೊಳ್ಳಲಾಗುವುದು.

ದಂಡ ಬಾಡಿಗೆಯನ್ನು ಮನ್ನಾ ಮಾಡುವ ಬಗ್ಗೆ

೧೦೬೫(ಎ) ಶ್ರೀ ಗೋಪಾಲ ಮುಕುಂದಕಾನಡೆ, (ಸಿರ್ಸಿ.)— ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಸೇವಾವಧಿಗೆ ಸೀಮಿತ ನಿಯಮಗಳ ಮೇರೆಗೆ ಸರ್ಕಾರಿ ವಸತಿಗೃಹಗಳನ್ನು ಪಡೆಯಲು ಬೇಕಾಗಿರುವ ಅರ್ಹತೆಗಳಾವುವು;

ಆ) ಈ ಸೇವಾವಧಿಗೆ ಸೀಮಿತ ನಿಯಮದಂತೆ ಬೆಂಗಳೂರು ನಗರದಲ್ಲಿರುವ ಲೋಕೋಪಯೋಗಿ ಎಲ್ಲಾ ವಸತಿಗೃಹಗಳಲ್ಲಿರುವ ನೌಕರರ ಸಂಖ್ಯೆ ಎಷ್ಟು? (ನೌಕರರ ಹೆಸರು, ವಿಳಾಸ, ವಸತಿಗೃಹ ವಿಳಾಸ ಮುಂತಾದ ವಿವರಗಳನ್ನು ನೀಡುವುದು)

ಇ) ಮೇಲ್ಕಂಡ ನಿಯಮಗಳಲ್ಲಿ ದಂಡಬಾಡಿಗೆಯನ್ನು ವಸೂಲು ಮಾಡಲು ಅವಕಾಶವಿದೆಯೇ; ಹಾಗಿದ್ದಲ್ಲಿ ಇದುವರೆವಿಗೂ ವಸೂಲಂ ಮಾಡಲಾಗಿರುವ ದಂಡ ಬಾಡಿಗೆಯ ಮೊತ್ತ ಎಷ್ಟು;

ಈ) ಈ ಮೇಲ್ಕಂಡ ವಸತಿಗೃಹದ ನಿವಾಸಿಗಳಿಂದ ದಂಡ ಬಾಡಿಗೆಯನ್ನು ಮನ್ನಾ ಮಾಡಲು ಮನವಿಗಳು ಬಂದಿವೆಯೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಸರ್ಕಾರಿ ವಸತಿಗೃಹ ಅಲಾಟ್‌ಮೆಂಟ್ ನಿಯಮಾವಳಿಗಳ ಪ್ರಕಾರ ಸರ್ಕಾರಿ ನೌಕರರು ವಿಧಾನ ಪರಿಷತ್ತಿನ ಸಭಾಪತಿಗಳ ವಿಧಾನ ಸಭಾಧ್ಯಕ್ಷರ ಸಚಿವರುಗಳ ರಾಜ್ಯ ಸಚಿವರುಗಳ ಉಪ ಸಚಿವರುಗಳ ಮತ್ತು ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಮಾತ್ರ ಸೇವಾವಧಿಗೆ ಸೀಮಿತ ಆಧಾರದ ಮೇಲೆ ವಸತಿಗೃಹವನ್ನು ಪಡೆಯಲು ಅರ್ಹತೆ ಇರುತ್ತದೆ.

ಆ) ಈ ನಿಯಮದಂತೆ ಬೆಂಗಳೂರಿನ ಈ ಕೆಳಗೆ ತಿಳಿಸಿರುವ ಬಡಾವಣೆಗಳಲ್ಲಿ ಸರ್ಕಾರಿ ವಸತಿ ಗೃಹಗಳಲ್ಲಿ ಒಟ್ಟು ೪೦ ಮಂದಿ ನೌಕರರು ವಾಸವಾಗಿರುತ್ತಾರೆ. ಅವರ ಹೆಸರು, ವಿಳಾಸ ಮುಂತಾದ ವಿವರಗಳಿರುವ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಜೀವನಭೀಮಾನಗರ	... ೧೯
ವಸಂತನಗರ	... ೬
ಜಯಮಹಲ್ ಬಡಾವಣೆ	... ೧೫
	೪೦

ಇ) ಇದೆ. ಈ ಪ್ರಕಾರ ಅನಧಿಕೃತ ವಾಸ ಮಾಡಿದ ನೌಕರರಿಂದ ದಂಡ ಬಾಡಿಗೆ ವಸೂಲು ಮಾಡಲು ಅವರವರ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಗಿದೆ.

ಈ) ಕೆಲವು ನಿವಾಸಿಗಳಿಂದ ದಂಡಬಾಡಿಗೆಯನ್ನು ಮನ್ನಾ ಮಾಡಲು ಮನವಿಗಳು ಬಂದಿವೆ.

ಉ) ದಂಡಬಾಡಿಗೆ ಮನ್ನಾ ಮಾಡಲು ಕೋರಿ ಬಂದಿರುವ ಮನವಿಗಳನ್ನು ವಿವರವಾಗಿ ಪರಿಶೀಲಿಸಲಾಗಿದೆ. ಹಾಗೂ ನಿಯಮಾವಳಿಗಳ ಪ್ರಕಾರ ದಂಡ ಬಾಡಿಗೆಯನ್ನು ಮನ್ನಾ ಮಾಡಲು ಅವಕಾಶ ಇರುವುದಿಲ್ಲವಾದ್ದರಿಂದ ಅವರ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.